ಪಿ.ಡಬ್ಲ್ಯು 1

(ದಿನಾಂಕ 10-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಫಿರ್ಯಾದಿಯ ಪ್ರಮಾಣೀಕೃತ ಹೇಳಿಕೆ**

ನಾನು ಈ ಪ್ರಕರಣದಲ್ಲಿ ಫಿರ್ಯಾದಿದಾರನಾಗಿದ್ದು, ನನ್ನ ಪ್ರಮಾಣೀಕೃತ ಹೇಳಿಕೆಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ನಾನು ನನ್ನ ಫಿರ್ಯಾದಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ.

ಆರೋಪಿಯು ದಿನಾಂಕಃ30-05-2025ರಂದು ನೀಡಿರುವ ಚೆಕ್‌ನ್ನು ನಿ.ಪಿ.1 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿ.ಪಿ.1ಎ ಎಂದು, ಬ್ಯಾಂಕನವರು ನೀಡಿರುವ ಹಿಂಬರಹವನ್ನು ನಿ.ಪಿ.2 ಎಂದು, ದಿನಾಂಕ:06-09-2025ರಂದು ಆರೋಪಿಗೆ ನೀಡಿರುವ ನೋಟಿಸ್‌ನ ಕಚೇರಿ ಪ್ರತಿಯನ್ನು ನಿ.ಪಿ.3 ಎಂದು, ಆರೋಪಿಗೆ ನೋಟಿಸ್ ನೀಡಿದ ಬಗ್ಗೆ ಅಂಚೆ ರಶೀದಿಯನ್ನು ನಿ.ಪಿ.4 ಎಂದು, ಆರೋಪಿಗೆ ನೀಡಿದ ನೋಟಿಸ್ ಜಾರಿಯಾಗದೇ ಹಿಂಬರಹದೊಂದಿಗೆ ಹಿಂದಿರುಗಿದ್ದು, ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ನೋಟಿಸಿನ ಮೂಲ ಪ್ರತಿಯನ್ನು ಕಚೇರಿ ಪ್ರತಿಯೊಂದಿಗೆ ತಾಳೆ ಮಾಡಿದ ನಂತರ ನೋಟಿಸಿನ ಮೂಲ ಪ್ರತಿಯನ್ನು ನಿ.ಪಿ. 5 ಎಂದು ಅಂಚೆ ಲಕೋಟೆಯನ್ನು ನಿ.ಪಿ. 5 ಎ ಎಂದು, ದಿನಾಂಕಃ21-03-2025, 22-03-2025, 02-04-2025, 03-04-2025, 05-04-2025ರಂದು ಆರೋಪಿ ಎಂಟರ್ಪ್ರೈಸಸ್‌ರವರಿಗೆ ರೂಫಿಗೆ ಸಂಬಂಧಪಟ್ಟ ಸಾಮ್ರಾಗ್ರಿಗಳನ್ನು ನೀಡಿದ Tax Invoiceನ್ನು ನಿಪಿ-6 ರಿಂದ 10 ಎಂದು, ಫಿರ್ಯಾದನ್ನು ನಿ.ಪಿ.11 ಎಂದು, ಫಿರ್ಯಾದಿಯಲ್ಲಿರುವ ಫಿರ್ಯಾದಿಯ ಸಹಿಗಳನ್ನು ನಿ.ಪಿ.11ಎ ಎಂದು ಗುರುತಿಸಲಾಯಿತು.

ನನ್ನ ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ಫಿರ್ಯಾದಿಯಲ್ಲಿ ಕೇಳಿರುವಂತೆ ಆದೇಶವಾಗಲು ಪ್ರಾರ್ಥನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಜೆ. ಎಂ. ಎಫ್. ಸಿ. ಕುಮಟಾ